# ಕರ್ನಾಟಕ ವಿಧಾನ ಸಭೆ
## ಹದಿನಾಲ್ಕನೇ ವಿಧಾನ ಸಭೆ
## ಆರನೇ ಅಧಿವೇಶನ
## (ಮುಂದುವರೆದ ಉಪವೇಶನ)

# ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2015
## (2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 09)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು 2015ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ.–** ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಅನುಸೂಚಿಯಲ್ಲಿ,–

(1) 5ನೇ ಅನುಚ್ಛೇದದಲ್ಲಿ,–

(ಎ) (ಜಿ) ಖಂಡಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಜಿ) ಚರಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿರುವಲ್ಲಿ,–

| | |
|---|---|
| (i) ಹಸ್ತಾಂತರಣವನ್ನು ಲಿಖಿತದಲ್ಲಿ ಕೊಡದೆ ಸ್ವತ್ತಿನ ಸ್ವಾಧೀನತೆಯನ್ನು ನೀಡಿದ್ದರೆ ಅಥವಾ ನೀಡಲಾಗುವುದೆಂದು ಒಪ್ಪಿಕೊಂಡಿದ್ದರೆ. | ಪ್ರತಿಫಲದ ಶೇಕಡಾ ಎರಡು ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಯಾವುದು ಹೆಚ್ಚೋ ಅದು: ಪರಂತು, ಒಂದೇ ಸ್ವತ್ತಿನ ಸಂಬಂಧದಲ್ಲಿ ಅದೇ ಪಕ್ಷಕಾರರ ನಡುವೆ ಆದ ಮುಂಚಿನ ಕರಾರನ್ನು ರದ್ದುಪಡಿಸುವ ಪತ್ರವನ್ನು ಬರೆದುಕೊಟ್ಟಿದ್ದಲ್ಲಿ ಮತ್ತು ಅಂಥ ಕರಾರಿನ ಮೇಲೆ ಸೂಕ್ತ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ ಆಗ ಅಂಥ "ರದ್ದುಪಡಿಸುವ ಪತ್ರ"ದ ಮೇಲಿನ ಶುಲ್ಕವು ಐದು ನೂರು ರೂಪಾಯಿಗಳನ್ನು ಮೀರತಕ್ಕದ್ದಲ್ಲ. |

| | |
|---|---|
| (ii) ಸ್ವತ್ತಿನ ಸ್ವಾಧೀನತೆಯನ್ನು ನೀಡದೇ ಇದ್ದಲ್ಲಿ, | ಪ್ರತಿಫಲದ ಮೊತ್ತಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ ಇಪ್ಪತ್ತು ಸಾವಿರ ರೂಪಾಯಿಗಳ ಗರಿಷ್ಠ ಆದರೆ ಐದು ನೂರು ರೂಪಾಯಿಗಳಿಗೆ ಕಡಿಮೆ ಇಲ್ಲದುದ್ದಕ್ಕೆ ಒಳಪಟ್ಟು ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಹತ್ತು ಪೈಸೆ. |

"

(ಬಿ) (i-ಡಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| | | |
|---|---|---|
| "(i-ಇ) | ಚಿಟ್ ಫಂಡ್ ಅಧಿನಿಯಮ, 1982ರ 6ನೇ ಪ್ರಕರಣದ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಲಿಖಿತವಾಗಿ ಚಿಟ್ ಒಪ್ಪಂದವನ್ನು ಮಾಡಿಕೊಂಡಲ್ಲಿ, ಚಿಟ್ ಮೌಲ್ಯವು,- | |
| | (i) ಒಂದು ಲಕ್ಷ ರೂಪಾಯಿಗಳು ಮೀರದಿದ್ದಲ್ಲಿ; | ಒಂದು ನೂರು ರೂಪಾಯಿಗಳು |
| | (ii) ಒಂದು ಲಕ್ಷ ರೂಪಾಯಿಗಳನ್ನು ಮೀರಿದ್ದು, ಆದರೆ ಐದು ಲಕ್ಷ ರೂಪಾಯಿಗಳು ಮೀರದಿದ್ದಲ್ಲಿ; | ಐದು ನೂರು ರೂಪಾಯಿಗಳು |
| | (iii) ಐದು ಲಕ್ಷ ರೂಪಾಯಿಗಳನ್ನು ಮೀರಿದಲ್ಲಿ, ಪ್ರತಿ ಎರಡು ಲಕ್ಷ ರೂಪಾಯಿಗಳು ಅಥವಾ ಅದರ ಭಾಗಕ್ಕೆ; | ಒಂದು ನೂರು ರೂಪಾಯಿಗಳು" |

(2) 6ನೇ ಅನುಚ್ಛೇದದಲ್ಲಿ,-

(ಎ) (1)ನೇ ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ವಿವರಣೆಯನ್ನು ಹೊರತುಪಡಿಸಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಯಾವುದೇ ರೀತಿಯ ಸ್ವತ್ತಿಗೆ (ಮಾರಾಟ ಮಾಡಬಹುದಾದ ಭದ್ರತಾ ಪತ್ರವನ್ನು ಹೊರತುಪಡಿಸಿ) ಸ್ವಾಮ್ಯವನ್ನುಂಟು ಮಾಡುವ ಅಥವಾ ಅದಕ್ಕೆ ಸಾಕ್ಷ್ಯವಾಗುವ ಸ್ವಾಮ್ಯ ಪತ್ರಗಳ ಅಥವಾ ಲಿಖಿತದ ಠೇವಣಿ, ಅಂತಹ ಠೇವಣಿಯನ್ನು ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡಬೇಕಾದ ಹಣ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯ ಋಣದ ಮರುಸಂದಾಯಕ್ಕಾಗಿ ಭದ್ರತೆಯ ರೂಪದಲ್ಲಿ ಮಾಡಿರುವಲ್ಲಿ;

| | |
|---|---|
| ಬೇಡಿಕೆಯ ಮೇಲೆ ಅಂತಹ ಸಾಲ ಅಥವಾ ಋಣವನ್ನು ಒಪ್ಪಂದಕ್ಕೆ ಸಾಕ್ಷ್ಯವಾಗಿರುವ ಲಿಖಿತ ಪತ್ರದ ದಿನಾಂಕದಿಂದ ಮರುಸಂದಾಯವಾಗುವುದಿದ್ದರೆ; | |
| (i) ಸಾಲ ಅಥವಾ ಋಣದ ಮೊತ್ತವು ಹತ್ತು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ; | ಐದು ನೂರು ರೂಪಾಯಿಗಳ ಕನಿಷ್ಠ ಮಿತಿಗೆ ಒಳಪಟ್ಟು ಸಾಲ ಅಥವಾ ಋಣದ ಮೊತ್ತದ ಮೇಲಿನ ಶೇ.0.1 |
| (ii) ಸಾಲ ಅಥವಾ ಋಣದ ಮೊತ್ತವು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದಲ್ಲಿ; | ಹತ್ತು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು ಸಾಲ ಅಥವಾ ಋಣದ ಮೊತ್ತದ ಮೇಲಿನ ಶೇ.0.2. |

"

(ಬಿ) (2)ನೇ ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, 2ನೇ ಅಂಕಣದಲ್ಲಿ ವಿವರಣೆಯನ್ನು ಮತ್ತು 3ನೇ ಅಂಕಣದಲ್ಲಿಯ ಪರಂತುಕವನ್ನು ಹೊರತುಪಡಿಸಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಚರ ಸ್ವತ್ತಿನ ಗಿರವಿ ಅಥವಾ ಒತ್ತೆಯನ್ನು ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡಬೇಕಾದ ಹಣ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯದ ಋಣದ ಮರುಸಂದಾಯದ ಭದ್ರತೆಗಾಗಿ ಅಂಥ ಗಿರವಿ ಅಥವಾ ಒತ್ತೆಯನ್ನು ಮಾಡಿದಲ್ಲಿ,–

| | |
|---|---|
| ಮರು ಸಂದಾಯನೀಯವಾದ ಅಂಥ ಸಾಲ ಅಥವಾ ಋಣವು ಬೇಡಿಕೆಯ ಮೇಲೆ ಅಥವಾ ಅನ್ಯಥಾ ಸಂದಾಯವಾದಲ್ಲಿ; | |
| (i) ಸಾಲದ ಮೊತ್ತವು ಒಂದು ಲಕ್ಷ ರೂಪಾಯಿಗಳನ್ನು ಮೀರಿದ ಆದರೆ ಹತ್ತು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ; | ಸಾಲ ಅಥವಾ ಋಣದ ಮೊತ್ತದ ಮೇಲಿನ ಶೇ.0.1 |
| (ii) ಸಾಲದ ಮೊತ್ತವು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದಲ್ಲಿ | ಹತ್ತು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಗೊಳಪಟ್ಟು ಸಾಲ ಅಥವಾ ಋಣದ ಮೊತ್ತದ ಮೇಲೆ ಶೇ.0.2. |

"

(3) 9ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಐವತ್ತು ರೂಪಾಯಿಗಳು" ಎಂಬ ಪದಗಳಿಗೆ "ಒಂದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(4) 10ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಪ್ರತಿ ಹತ್ತು ಲಕ್ಷ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐದು ನೂರು ರೂಪಾಯಿಗಳು" ಎಂಬ ಪದಗಳಿಗೆ "ಗರಿಷ್ಠ ಐವತ್ತು ಲಕ್ಷ ರೂಪಾಯಿಗಳಿಗೆ ಒಳಪಟ್ಟು ಪ್ರತಿ ಹತ್ತು ಲಕ್ಷ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

(5) 18ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಐವತ್ತು ರೂಪಾಯಿಗಳು" ಎಂಬ ಪದಗಳಿಗೆ "ಒಂದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(6) 19ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳಿಗೆ "ಎರಡು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(7) 20ನೇ ಅನುಚ್ಛೇದದ 5ನೇ ಖಂಡಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(5) ಕೈಗಾರಿಕಾ ಯಂತ್ರಗಳಿಗೆ ಸಂಬಂಧಿಸಿದ ಹಸ್ತಾಂತರಣ,–

| | |
|---|---|
| (i) ಕೈಗಾರಿಕಾ ಯಂತ್ರಗಳನ್ನು ಚರ ಸ್ವತ್ತು ಎಂದು ಪರಿಗಣಿಸಿದಾಗ | ಸ್ವತ್ತಿನ ಪ್ರತಿಫಲ ಅಥವಾ ಮಾರುಕಟ್ಟೆ ಮೌಲ್ಯದ ಶೇಕಡಾ ಎರಡು ಯಾವುದು ಹೆಚ್ಚೋ ಅದು, |
| (ii)ಕೈಗಾರಿಕಾ ಯಂತ್ರಗಳನ್ನು ಸ್ಥಿರಸ್ವತ್ತು ಎಂದು ಪರಿಗಣಿಸಿದಾಗ | ಸ್ವತ್ತಿನ ಪ್ರತಿಫಲ ಅಥವಾ ಮಾರುಕಟ್ಟೆ ಮೌಲ್ಯದ ಶೇಕಡಾ ಐದು, ಯಾವುದು ಹೆಚ್ಚೋ ಅದು. |

"

(8) 32ಎ ಅನುಚ್ಛೇದದಲ್ಲಿ,–

(i) 2ನೇ ಅಂಕಣದಲ್ಲಿ "ಠೇವಣಿ ಮೂಲಕ ನೀಡಿದ" ಎಂಬ ಪದಗಳ ತರುವಾಯ "ಅಥವಾ ತಯಾರಿಕೆ, ವ್ಯಾಪಾರ, ವ್ಯವಹಾರ ಅಥವಾ ವೃತ್ತಿಗಾಗಿ ನೀಡಿದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ii)ನೇ ಖಂಡದ 3ನೇ ಅಂಕಣದಲ್ಲಿ "ಮುಂಗಡ ಹಣದ" ಎಂಬ ಪದಗಳಿಗೆ ಮೊದಲು "ಕನಿಷ್ಠ ಐವತ್ತು ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) (iii)ನೇ ಖಂಡದ 3ನೇ ಅಂಕಣದಲ್ಲಿ "ಮುಂಗಡ ಹಣದ" ಎಂಬ ಪದಗಳಿಗೆ ಮೊದಲು "ಕನಿಷ್ಠ ಒಂದು ನೂರು ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

(iv) (iv)ನೇ ಖಂಡದ 3ನೇ ಅಂಕಣದಲ್ಲಿ "ಮುಂಗಡ ಹಣದ" ಎಂಬ ಪದಗಳಿಗೆ ಮೊದಲು "ಕನಿಷ್ಠ ಎರಡು ನೂರು ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

(v) (v)ನೇ ಖಂಡದ 3ನೇ ಅಂಕಣದಲ್ಲಿ "ಮುಂಗಡ ಹಣದ" ಎಂಬ ಪದಗಳಿಗೆ ಮೊದಲು "ಕನಿಷ್ಠ ಮೂರು ನೂರು ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

(9) 34ನೇ ಅನುಚ್ಛೇದದ (ಡಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ವಿನಾಯಿತಿಯನ್ನು ಹೊರತುಪಡಿಸಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಡಿ) ಚರಸ್ವತ್ತಿನ ಆಧಾರಕ್ಕಾಗಿ

| | |
|---|---|
| ಸಾಲ ಅಥವಾ ಋಣವು ಬೇಡಿಕೆಯ ಮೇಲೆ ಸಂದಾಯವಾದರೆ | |
| (i) ಸಾಲದ ಮೊತ್ತವು ಹತ್ತು ಲಕ್ಷ ರೂಪಾಯಿಗಳು ಮೀರದಿರುವಲ್ಲಿ; | ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಹತ್ತು ರೂಪಾಯಿಗಳು. |
| (ii) ಸಾಲದ ಮೊತ್ತವು ಹತ್ತು ಲಕ್ಷ ರೂಪಾಯಿಗಳನ್ನು ಮೀರುವಲ್ಲಿ; | ಗರಿಷ್ಠ ಹತ್ತು ಲಕ್ಷ ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಇಪ್ಪತ್ತು ರೂಪಾಯಿಗಳು. |

"

(10) 37ನೇ ಅನುಚ್ಛೇದದ (ಸಿ) ಖಂಡದ 3ನೇ ಅಂಕಣದಲ್ಲಿ "ಒಂದು ಸಾವಿರ ರೂಪಾಯಿಗಳಿಗೊಳಪಟ್ಟು" ಎಂಬ ಪದಗಳಿಗೆ "ಐವತ್ತು ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(11) 38ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಎರಡು ರೂಪಾಯಿಗಳು" ಎಂಬ ಪದಗಳಿಗೆ "ಐವತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(12) 40ನೇ ಅನುಚ್ಛೇದ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು.

| | | |
|---|---|---|
| "40ಎ | **ಸೀಮಿತ ಹೊಣೆಗಾರಿಕೆ ಪಾಲುದಾರಿಕೆ,–**<br>**ಎ.** ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯ ಸ್ಥಾಪನೆ ಅಥವಾ ಫರ್ಮ್/ಖಾಸಗಿ ಕಂಪನಿ/ಪಟ್ಟಿಯಲ್ಲಿಲ್ಲದ ಸಾರ್ವಜನಿಕ ಸೀಮಿತ ಕಂಪನಿಯನ್ನು ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯನ್ನಾಗಿ ಮಾರ್ಪಡಿಸುವಿಕೆ. | |

| | | |
|---|---|---|
| | (ಎ) ಬಂಡವಾಳವು ಹತ್ತು ಲಕ್ಷ ರೂಪಾಯಿಗಳನ್ನು ಮೀರದಿರುವಲ್ಲಿ | ಒಂದು ಸಾವಿರ ರೂಪಾಯಿಗಳು |
| | (ಬಿ) ಬಂಡವಾಳವು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದಲ್ಲಿ; ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ ಪ್ರತಿ ಐದು ಲಕ್ಷ ರೂಪಾಯಿಗಳು ಅಥವಾ ಅದರ ಭಾಗಕ್ಕೆ | ಐದುನೂರು ರೂಪಾಯಿಗಳು. |
| | **ಬಿ.** ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯ ಪುನಾರಚನೆ ಅಥವಾ ಸಂಯೋಜನೆ | ಕರ್ನಾಟಕ ರಾಜ್ಯದಲ್ಲಿರುವ ಹಸ್ತಾಂತರಣ ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯ ಸ್ವತ್ತಿನ ಪ್ರತಿಫಲ ಅಥವಾ ಮಾರುಕಟ್ಟೆ ಮೌಲ್ಯ ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲಿನ ಶೇಕಡ ಎರಡು." |

(13) 43ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಐದು ರೂಪಾಯಿಗಳು" ಎಂಬ ಪದಗಳಿಗೆ "ಐವತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(14) 47ನೇ ಅನುಚ್ಛೇದದ (ಎ) ಮತ್ತು (ಬಿ) ಖಂಡಗಳು ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ "ವಿನಾಯಿತಿ"ಗೆ ಮೊದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

| | |
|---|---|
| "(ಎ) ಭದ್ರತಾ ಮೊತ್ತವು ಒಂದು ಸಾವಿರ ರೂಪಾಯಿಗಳನ್ನು ಮೀರದಿರುವಾಗ | ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ |
| (ಬಿ) ಯಾವುದೇ ಇತರ ಸಂದರ್ಭದಲ್ಲಿ | ಎರಡು ನೂರು ರೂಪಾಯಿಗಳು" |

(15) 55ನೇ ಅನುಚ್ಛೇದದ 3ನೇ ಅಂಕಣದಲ್ಲಿ "ಹತ್ತು ರೂಪಾಯಿಗಳು" ಎಂಬ ಪದಗಳಿಗೆ "ಐವತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾಡಿರುವ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ, 34) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ. ಶ್ರೀನಿವಾಸ್ ಪ್ರಸಾದ್**
ಕಂದಾಯ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ**

**(1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ**

**xx xx xx**

**ಅನುಸೂಚಿ**

**5. ಒಪ್ಪಂದ ಅಥವಾ ಅದರ ದಾಖಲೆಗಳು ಅಥವಾ ಒಪ್ಪಂದದ ವಿವರಣ ಪತ್ರ.–**

**xx xx xx**

| | |
|---|---|
| (ಜಿ)ಚರಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿರುವಲ್ಲಿ | ಈ ಅನುಚ್ಛೇದ(ಇ) ಉಪಖಂಡದಲ್ಲಿ ವಿಧಿಸಬಹುದಾದ ಅದೇ ಸುಂಕ. |

**xx xx xx**

**6. ಸ್ವಾಮ್ಯ ಪತ್ರಗಳು, ಗಿರವಿ, ಅಥವಾ ಒತ್ತೆ ಠೇವಣಿಗೆ ಸಂಬಂಧಿಸಿದ ಒಪ್ಪಂದ** ಎಂದರೆ ಈ ಮುಂದಿನವುಗಳಿಗೆ ಸಂಬಂಧಿಸಿದ ಒಪ್ಪಂದಕ್ಕೆ ಸಾಕ್ಷ್ಯವಾಗುವ ಯಾವುದೇ ಲಿಖಿತ,–

| | |
|---|---|
| (1) ಯಾವುದೇ ರೀತಿಯ ಸ್ವತ್ತಿಗೆ (ಮಾರಾಟ ಮಾಡಬಹುದಾದ ಭದ್ರತಾ ಪತ್ರವನ್ನೂ ಹೊರತುಪಡಿಸಿ) ಸ್ವಾಮ್ಯವನ್ನುಂಟು ಮಾಡುವ ಅಥವಾ ಅದಕ್ಕೆ ಸಾಕ್ಷ್ಯವಾಗುವ ಸ್ವಾಮ್ಯ ಪತ್ರಗಳ ಅಥವಾ ಲಿಖಿತದ ಠೇವಣಿ ಅಂಥ ಠೇವಣಿಯನ್ನು ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡಬೇಕಾದ ಹಣ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯ ಋಣದ ಮರುಸಂದಾಯಕ್ಕಾಗಿ ಭದ್ರತೆಯ ರೂಪದಲ್ಲಿ ಮಾಡಲಾಗಿರುವಲ್ಲಿ,–<br><br>ಕರಾರನ್ನು ಸಾಕ್ಷಿಕರಿಸುವ ಲಿಖಿತ ಪತ್ರದ ದಿನಾಂಕದಿಂದ ಅಂಥ ಸಾಲ ಅಥವಾ ಋಣ ಕೋರಿದಾಗ ಮರು ಸಂದಾಯ ಮಾಡತಕ್ಕದ್ದಾಗಿದ್ದರೆ. | ಗರಿಷ್ಠ ರೂ.50000/– ಗಳಿಗೆ ಒಳಪಟ್ಟು ಆದರೆ ರೂ.500/– ಗಳಿಗೆ ಕಡಿಮೆ ಇಲ್ಲದಂತೆ ಸಾಲ ಅಥವಾ ಋಣದ ಮೊಬಲಗಿನ ಮೇಲೆ ಶೇ.0.1<br>**ವಿವರಣೆ–**<br>(1)ನೇ ಖಂಡದ ಉದ್ದೇಶಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಆದೇಶದಲ್ಲಿ, ಯಾವುದೇ ಪತ್ರದಲ್ಲಿ, ಟಿಪ್ಪಣಿಯಲ್ಲಿ, ವಿವರಣ ಪತ್ರದಲ್ಲಿ ಅಥವಾ ಸ್ವಾಮ್ಯ ಪತ್ರಗಳ ಠೇವಣಿಗೆ ಸಂಬಂಧಿಸಿದ ಲಿಖಿತದಲ್ಲಿ ಏನೇ ಒಳಗೊಂಡಿದ್ದರೂ, ಲಿಖಿತದಲ್ಲಿಯಾಗಲೀ ಅಥವಾ ಹಕ್ಕು ಸ್ವಾಮ್ಯ ಪತ್ರಗಳ ಠೇವಣಿಯು ಪರಿಣಾಮಕಾರಿಯಾಗುವಂತೆ ಮಾಡುವ ಮೊದಲಾಗಲೀ ಅಥವಾ ಆ ಸಮಯದಲ್ಲಾಗಲೀ ಅಥವಾ ನಂತರವಾಗಲೀ ಮತ್ತು ಮೊದಲ ಸಾಲಕ್ಕಾಗಿ ಅಥವಾ ಯಾವುದೇ ಹೆಚ್ಚುವರಿ ಸಾಲಕ್ಕಾಗಿ ಅಥವಾ ತರುವಾಯ ತೆಗೆದುಕೊಂಡ ಸಾಲಕ್ಕಾಗಿನ ಭದ್ರತೆಯಲ್ಲಿನ ಸಂಬಂದದಲ್ಲಿಯಾಗಲೀ, |

| | |
|---|---|
| | ಅಂಥ ಪತ್ರ, ಟಿಪ್ಪಣಿ ವಿವರಣಾ ಪತ್ರ ಅಥವಾ ಲಿಖಿತವನ್ನು ಅಂಥ ಹಕ್ಕು ಸ್ವಾಮ್ಯ ಪತ್ರಗಳ ಠೇವಣಿಗೆ ಸಂಬಂಧಿಸಿದ ಯಾವುದೇ ಪ್ರತ್ಯೇಕ ಒಪ್ಪಂದದ ಅಥವಾ ಒಪ್ಪಂದದ ವಿವರಣ ಪತ್ರವು ಇಲ್ಲದಿರುವಲ್ಲಿ, ಹಕ್ಕು ಸ್ವಾಮ್ಯ ಪತ್ರದ ಠೇವಣಿಗೆ ಸಂಬಂಧಿಸಿದ ಒಪ್ಪಂದವನ್ನು ಸಾಕ್ಷ್ಯದ ಲಿಖಿತವಾಗಿರುತ್ತದೆಂದು ಭಾವಿಸತಕ್ಕದ್ದು. |
| (2) ಚರ ಸ್ವತ್ತಿನ ಗಿರವಿ, ಅಥವಾ ಒತ್ತೆ ಅಂಥ ಗಿರವಿ, ಅಥವಾ ಒತ್ತೆ ಅಡಮಾನವನ್ನು ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡಬೇಕಾದ ಹಣ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯದ ಋಣದ ಮರು ಸಂದಾಯಕ್ಕಾಗಿ ಭದ್ರತೆಗಾಗಿ ಅಂಥ ಗಿರವಿ, ಒತ್ತೆ ಅಥವಾ ಅಡಮಾನವನ್ನು ಮಾಡಿದ್ದಲ್ಲಿ,–<br>ಅಂಥ ಸಾಲ ಅಥವಾ ಋಣವು ಬೇಡಿಕೆಯ ಮೇಲೆ ಮರು ಸಂದಾಯವಾದಲ್ಲಿ,<br><br>**ವಿನಾಯಿತಿ:** ಒಂದು ಲಕ್ಷ ರೂಪಾಯಿಗಳವರೆಗೆ ಅಂಥ ಸಾಲ ಅಥವಾ ಋಣ ಇವುಗಳಲ್ಲಿ ಸರಕುಗಳ ಅಥವಾ ಆಭರಣಗಳ ಗಿರವಿ ಅಥವಾ ಅಡಮಾನದ ಹಸ್ತಾಂತರಗಳು | ಗರಿಷ್ಠ ಐವತ್ತು ಸಾವಿರ ರೂಪಾಯಿಗಳಿಗೆ ಒಳಪಟ್ಟು ಸಾಲ ಅಥವಾ ಋಣದ ಮೇಲಿನ ಪ್ರತಿ ಒಂದು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.<br>ಪರಂತು, ಸಾಲದ ರೂಪದಲ್ಲಿ ಈಗಾಗಲೇ ಕೊಟ್ಟ ಹಣದ ಮರುಸಂದಾಯಕ್ಕಾಗಿ ಅವೇ ಪಕ್ಷಕಾರರ ನಡುವೆ ಮತ್ತು ಅದೇ ಉದ್ದೇಶಕ್ಕಾಗಿ ಮತ್ತು ಅದೇ ಮೊಬಲಗಿಗಾಗಿ ಮತ್ತು ಹಿಂದಿನ ಹಸ್ತಾಂತರಣಕ್ಕೆ ಈಗಾಗಲೇ ಸುಂಕವನ್ನು ಪಾವತಿಸಿರುವ, ಪಡೆದುಕೊಳ್ಳುವುದಕ್ಕಾಗಿ ಬರೆದುಕೊಡಲಾಗಿದ್ದರೆ ಸ್ವತ್ತಿನ ಗಿರವಿ ಅಥವಾ ಅಡಮಾನದ ಹೊಸ ಹಸ್ತಾಂತರಣವಿದ್ದಲ್ಲಿ, ಆಗ ಅಂಥ ಹೊಸ ಹಸ್ತಾಂತರಣದ ಮೇಲೆ ಚಾರ್ಜು ಮಾಡಬೇಕಾಗಿರುವ ಸುಂಕವು ಈ ಅನುಸೂಚಿಯ 5ನೇ ಅನುಚ್ಛೇದದ (ಜೆ) ಖಂಡದ ಅನ್ವಯ ಚಾರ್ಜು ಮಾಡತಕ್ಕದ್ದು. |

**XX XX XX**

| | | |
|---|---|---|
| 9. | ಯಾವುದೇ ವೃತ್ತಿ ವ್ಯಾಪಾರ ಅಥವಾ ನಿಯೋಜನೆಯನ್ನು ಕಲಿಯಲು ಯಾವನೇ ಮಾಸ್ತರನೊಂದಿಗೆ ಇರಿಸ ಲಾದ ಯಾವನೇ ಉಮೇದುವಾರ, ಗುಮಾಸ್ತ ಅಥವಾ ಸೇವಕನ ಸೇವೆ ಅಥವಾ ಪಾತಕ್ಕೆ ಸಂಬಂಧಪಟ್ಟ ಪ್ರತಿಯೊಂದು ಬರವಣಿಗೆಯನ್ನು ಒಳಗೊಂಡು **ಉಮೇದುದಾರಿಕೆ ಪತ್ರ.**<br>**ವಿನಾಯಿತಿ:**<br>ಯಾವುದೇ ಸಾರ್ವಜನಿಕ ದಾನಧರ್ಮದ ಮೂಲಕ ಅಥವಾ ಅದರ ವೆಚ್ಚದಲ್ಲಿ ಒಬ್ಬ ವ್ಯಕ್ತಿಯನ್ನು ಉಮೇದುದಾರನನ್ನಾಗಿ ಮಾಡಿದಂಥ ಉಮೇದುವಾರಿಕೆ ಲಿಖಿತಗಳು. | ಐವತ್ತು ರೂಪಾಯಿಗಳು |

**XX XX XX**

| | | |
|---|---|---|
| 10. | ಕಂಪನಿಯು ಷೇರು ಬಂಡವಾಳ ಅಥವಾ ಅತ್ಯಲ್ಪ ಷೇರು ಬಂಡವಾಳ ಅಥವಾ ಹೆಚ್ಚುವರಿ ಷೇರು ಬಂಡವಾಳ ಅಥವಾ ಹೆಚ್ಚುವರಿ ಷೇರು ಬಂಡವಾಳವನ್ನು ಹೊಂದಿಲ್ಲದಿದ್ದಲ್ಲಿ, **ಆ ಕಂಪನಿಯ ಸಂಘದ ನಿಯಮಾವಳಿಗಳು;**<br>**ವಿನಾಯಿತಿ:**<br>ಲಾಭಕ್ಕಾಗಿ ರಚಿಸಿಲ್ಲದ ಮತ್ತು 1956ರ ಕಂಪನಿಗಳ ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ನೊಂದಾಯಿಸಿದ ಯಾವುದೇ ಸಂಘದ ನಿಯಮಾವಳಿಗಳು, ಕಂಪನಿಯ ಸಂಘದ ಜ್ಞಾಪನ ಪತ್ರವನ್ನು ಸಹ ನೋಡಿ (ಸಂ.33) | ಪ್ರತಿ ಹತ್ತು ಲಕ್ಷ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐದುನೂರು ರೂಪಾಯಿಗಳು. |

**XX XX XX**

| | | |
|---|---|---|
| 18. | ಹಡಗು ಬಾಡಿಗೆ ಕರಾರು, ಎಂದರೆ ಯಾವ ಲಿಖಿತದ ಮೂಲಕ ಹಡಗು ಅಥವಾ ಕೆಲವು ಅದರ ನಿರ್ದಿಷ್ಟ ಮುಖ್ಯ ಭಾಗವನ್ನು ಬಾಡಿಗೆ ಕರಾರಿನ ನಿರ್ದಿಷ್ಟ ಉದ್ದೇಶಗಳಿಗಾಗಿ ಬಿಟ್ಟುಕೊಡ ಲಾಗಿದೆಯೋ ಆ ಯಾವುದೇ ಲಿಖಿತ.<br>(ಒಂದು ಟಗ್ ಸ್ಟೀಮರಿನ ಬಾಡಿಗೆಯ ಒಪ್ಪಂದವನ್ನು ಹೊರತುಪಡಿಸಿ) ಅದು ದಂಡ ವಿಧಿಸುವ ಖಂಡವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ. | ಐವತ್ತು ರೂಪಾಯಿಗಳು |

**XX XX XX**

| | | |
|---|---|---|
| 19. | **ಒಡಂಬಡಿಕೆ ಪತ್ರ** ಎಂದರೆ ಋಣಿಯು ಬರೆದುಕೊಟ್ಟ ಯಾವ ಲಿಖಿತದ ಮೂಲಕ ಅವನು ತನ್ನ ಸ್ವತ್ತನ್ನು ಸಾಲಕೊಟ್ಟವರ ಪ್ರಯೋಜನಕ್ಕಾಗಿ ಹಸ್ತಾಂತರಿಸುವನೋ ಅಥವಾ ಸಾಲ ಕೊಟ್ಟವರಿಗೆ ಅವರ ಋಣಗಳ ಮೇಲೆ ಒಡಂಬಡಿಕೆ ಅಥವಾ ಡಿವಿಡೆಂಡಿನ ಸಂದಾಯವನ್ನು ಭದ್ರಗೊಳಿಸಲಾಗಿದೆ ಯೋ ಅಥವಾ ಅವನ ಸಾಲ ಕೊಟ್ಟವರ ಪ್ರಯೋಜನಕ್ಕಾಗಿ ಪರಿಶೀಲಕರ ಮೇಲ್ವಿ ಚಾರಣೆಯಲ್ಲಿ ಅಥವಾ ಲೈಸನ್ಸ್ ಪತ್ರಗಳ ಮೇರೆಗೆ ಋಣಿಯ ವ್ಯವಹಾರವನ್ನು ಮುಂದುವರಿಸುವುದಕ್ಕಾಗಿ ಏರ್ಪಾಡು ಮಾಡಲಾಗಿದೆಯೋ, ಆ ಯಾವುದೇ ಲಿಖಿತ. | ಒಂದು ನೂರು ರೂಪಾಯಿಗಳು |

**XX XX XX**

| | | |
|---|---|---|
| 20. | **ಹಸ್ತಾಂತರಣ ಪತ್ರ.–** (1)<br>**XX XX XX**<br>(5) ಸ್ಥಿರಾಸ್ತಿಗಳಂತಾಗಲೀ ಅಥವಾ ಚರಾಸ್ತಿಗಳಂತಾಗಲೀ ಕೈಗಾರಿಕಾ ಯಂತ್ರಗಳಿಗೆ ಸಂಬಂಧಿಸಿದ ಹಸ್ತಾಂತರಣ ಪತ್ರ | ಮಾರುಕಟ್ಟೆ ಮೌಲ್ಯದ ಶೇಕಡ ಐದರಷ್ಟು |

**XX XX XX**
**XX XX XX**

| | | |
|---|---|---|
| 32ಎ | **ಸ್ಥಿರ ಅಥವಾ ಚರ ಸ್ವತ್ತಿನ ಲೈಸೆನ್ಸು.–** ಎಂದರೆ, ಮಾಲೀಕನು ಅಥವಾ ಪ್ರಾಧಿಕಾರವು ಬಾಡಿಗೆಗಾಗಿ ಅಥವಾ ಫೀಜಿಗಾಗಿ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಮುಂಗಡ ಹಣ ಅಥವಾ ಭದ್ರತಾ ಠೇವಣಿಯ ಮೂಲಕ ನೀಡಿದ ಲೈಸೆನ್ಸು,– | |
| | **(i)**ವಸತಿ ಉದ್ದೇಶಕ್ಕಾಗಿ ಒಂದು ವರ್ಷವನ್ನು ಮೀರದ ಅವಧಿಗೆ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ | ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯ, ರುಸುಂ ಮತ್ತು ಮುಗಡ ಹಣದ ಒಟ್ಟು ಮೊಬಲಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ, ಗರಿಷ್ಠ ಐದು ನೂರು ರೂಪಾಯಿಗಳು. |
| | **(ii)** ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶಕ್ಕಾಗಿ ಒಂದು ವರ್ಷವನ್ನು ಮೀರದ ಅವಧಿಗೆ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ | ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಲಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ. |
| | **(iii)** ಒಂದು ವರ್ಷವನ್ನು ಮೀರುವ ಆದರೆ ಹತ್ತು ವರ್ಷಗಳನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ | ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ, ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಲಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. |
| | **(iv)** ಹತ್ತು ವರ್ಷವನ್ನು ಮೀರುವ ಆದರೆ ಇಪ್ಪತ್ತು ವರ್ಷಗಳನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯವಾಗುವಲ್ಲಿ | ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಲಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ. |

| | | |
|---|---|---|
| | (v) ಇಪ್ಪತ್ತು ವರ್ಷವನ್ನು ಮೀರುವ ಆದರೆ ಮೂವತ್ತು ವರ್ಷಗಳನ್ನು ಮೀರದ ಅವಧಿಗಾಗಿ ಲೈಸೆನ್ಸ್ ಇದೆ ಎಂದು ತಾತ್ಪರ್ಯ ವಾಗುವಲ್ಲಿ | ಸರಾಸರಿ ವಾರ್ಷಿಕ ಬಾಡಿಗೆ, ಪ್ರೀಮಿಯಂ ರುಸುಂ ಮತ್ತು ಮುಂಗಡ ಹಣದ ಒಟ್ಟು ಮೊಬಲಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂರು ರೂಪಾಯಿಗಳು". |

**XX XX XX**

| | | |
|---|---|---|
| 34. | ಹಕ್ಕುಪತ್ರಗಳನ್ನಿಡುವುದು, ಗಿರವಿ ಅಥವಾ ಒತ್ತೆ (ಸಂಖ್ಯೆ.6) ನೌಕಾ ಬಂಧಪತ್ರ (ಸಂಖ್ಯೆ.13), ಫಸಲಿನ ಅಡಮಾನ (ಸಂಖ್ಯೆ.35), ನೌಕಾ ಸರಕುಗಳ ಬಂಧಪತ್ರ (ಸಂಖ್ಯೆ 46, ಅಥವಾ ಭದ್ರತಾ ಬಂಧಪತ್ರ (ಸಂಖ್ಯೆ 47) ಇವುಗಳಿಗೆ ಸಂಬಂಧಪಟ್ಟ ಒಪ್ಪಂದವಲ್ಲದ ಅಡಮಾನ ಪತ್ರ.<br><br>(ಎ) **XX XX XX**<br><br>(ಡಿ) ಚರಸ್ವತ್ತಿನ ಆಧಾರಕ್ಕಾಗಿ | ಹತ್ತು ಸಾವಿರ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು ಮುಂಗಡವಾಗಿ ನೀಡಿದ ಪ್ರತಿ ಹತ್ತು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಹತ್ತು ರೂಪಾಯಿಗಳು. |

**XX XX XX**

| | | |
|---|---|---|
| 37. | ವ್ಯವಹಾರಗಳ (ವಿದ್ಯುನ್ಮಾನ ಅಥವಾ ಇತರ ರೀತಿಯ) ಟಿಪ್ಪಣಿ ಅಥವಾ ಜ್ಞಾಪನ ಪತ್ರ.– ದಳ್ಳಾಳಿ ಅಥವಾ ಏಜೆಂಟನು ಯಜಮಾನನಿಗಾಗಿ ಖರೀದಿ ಅಥವಾ ಮಾರಾಟವನ್ನು ಸೂಚಿಸಿ ಯಜಮಾನನಿಗೆ ಕಳುಹಿಸಿದ್ದು ಅಥವಾ ಕರ್ನಾಟಕ ರಾಜ್ಯದಲ್ಲಿ ಅಥವಾ ಬೇರೆಡೆ ನಿವಾಸಿಯಾಗಿರುವ ಕಕ್ಷಿದಾರ (ಯಜಮಾನನ) ಪರವಾಗಿ ಸ್ಟಾಕ್ ಎಕ್ಸ್ ಚೇಂಜ್ ಅಥವಾ ಸಂಘ ಸಂಸ್ಥೆ ಮೂಲಕ ಅಥವಾ ಅನ್ಯಥಾ, ವ್ಯಾಪಾರಿ ಸದಸ್ಯರು (ಏಜೆಂಟ್) ಮಾಡಿದ ವ್ಯವಹಾರ<br>(ಎ) **XX XX XX**<br><br>(ಸಿ) ಸರ್ಕಾರಿ ಭದ್ರತಾ ಪತ್ರಗಳು | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಆ ಭದ್ರತಾ ಪತ್ರಗಳ ಮೌಲ್ಯದ ಮೇಲೆ ಗರಿಷ್ಠ ಒಂದು ಸಾವಿರ ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. |

**xx xx xx**

| | | |
|---|---|---|
| 38. | ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ ಪತ್ರ. ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ (ಸಂ.43) ಸಹ ನೋಡಿ | ಎರಡು ರೂಪಾಯಿಗಳು |

**xx xx xx**

| | | |
|---|---|---|
| 43. | ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ– ಎಂದರೆ, ನಷ್ಟಗಳ ಹೊಂದಾಣಿಕೆ ಅಥವಾ ಸರಾಸರಿಗಳ ಲೆಕ್ಕ ಹಾಕುವಿಕೆಯ ದೃಷ್ಟಿಯಿಂದ ಅವನು ಬರೆದಿರುವ ಹಡಗಿನ ಯಾನದ ವಿವರಗಳ ಯಾವುದೇ ಘೋಷಣೆ ಮತ್ತು ಘೋಷಣೆಯನ್ನು ನೋಟರಿ ಪಬ್ಲಿಕ್ ಅಥವಾ ಹಾಗೆಂದು ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುವ ಇತರವ್ಯಕ್ತಿಯು ಅನುಪ್ರಮಾಣಿಸಿರುವಾಗ, ಅಥವಾ ಪ್ರಮಾಣೀಕರಿಸಿರುವಾಗ, ಹಡಗಿಗೆ ಹೇರದೆ ಅಥವಾ ಭಾರ ಇಳಿಸದೆ ಇರುವುದಕ್ಕಾಗಿ, ಬಾಡಿಗೆ ತೆಗೆದುಕೊಂಡಿರುವವರ ಅಥವಾ ಸರಕು ಪಡೆಯುವವರ ವಿರುದ್ಧ ಅವನು ಬರಹದಲ್ಲಿ ಮಾಡಿದ ಅಂಥ ಪ್ರತಿಯೊಂದು ಘೋಷಣೆ, ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ ಪತ್ರ (ಸಂ.38) ಸಹ ನೋಡಿ. | ಐದು ರೂಪಾಯಿಗಳು |

**xx xx xx**

| | | |
|---|---|---|
| 47. | ಪದದ ಯುಕ್ತ ನಿರ್ವಹಣೆಗಾಗಿ ಭದ್ರತೆಯೆಂದು ಅಥವಾ ಅದರಿಂದಾಗಿ ಸ್ವೀಕರಿಸಿದ ಹಣ ಅಥವಾ ಇತರ ಸ್ವತ್ತಿಗೆ ಲೆಕ್ಕಕೊಡಲು ಬರೆದುಕೊಟ್ಟ ಅಥವಾ ಕರಾರಿನ ಯುಕ್ತ ನೆರವೇರಿಕೆಯನ್ನು ಸುನಿಶ್ಚಿತಗೊಳಿಸಲು ಜಾಮೀನುದಾರನು ಬರೆದು ಕೊಡುವ ಭದ್ರತಾ ಬಂಧಪತ್ರ ಅಥವಾ ಅಡಮಾನ ಪತ್ರ.<br>(ಎ) ಭದ್ರತೆಯ ಮೇಲೆ ಕೊಡಲಾದ ಮೊಬಲಗು 1000 ರೂಪಾಯಿಗಳಿಗೆ ಮೀರದಿರುವಾಗ<br><br>(ಬಿ) ಯಾವುದೇ ಇತರ ಸಂದರ್ಭದಲ್ಲಿ | ಭದ್ರತೆಯ ಮೇಲೆ ಕೊಡಲಾದ ಮೊಬಲಗಿನ ಬಂಧಪತ್ರ (ಸಂ.12) ಎಂಬಂತೆ ಅದೇ ಸುಂಕ. |

**xx xx xx**

| | | |
|---|---|---|
| 55. | ಸರಕುಗಳಿಗಾಗಿ ವಾರಂಟ್ ಎಂದರೆ, ಯಾವುದೇ ಹಡಗುಕಟ್ಟೆ ಸರಕುಗಳ ಉಗ್ರಾಣ ಅಥವಾ ಬಂದರು ಕಟ್ಟೆಯಲ್ಲಿ ಅಥವಾ ಅದರ ಮೇಲೆ ಇರುವ ಯಾವುದೇ ಸರಕುಗಳಲ್ಲಿನ ಸ್ವಾಮ್ಯಕ್ಕೆ ಅದರಲ್ಲಿ ಹೆಸರಿಸಿದ ಯಾವನೇ ವ್ಯಕ್ತಿ ಅಥವಾ ಅವನ ಹಸ್ತಾಂತರಿಗಳ ಅಥವಾ ಅದರ ಧಾರಕನ ಸ್ವಾಮ್ಯವನ್ನು ಸಾಕ್ಷೀಕರಿಸುವ ಯಾವುದೇ ಲಿಖಿತ; ಅಂಥ ಲಿಖಿತಕ್ಕೆ ಅಂಥ ಸರಕುಗಳ ಅಭಿರಕ್ಷೆಯನ್ನು ಹೊಂದಿರಬಹುದಾದ ವ್ಯಕ್ತಿಯು ಅಥವಾ ಅವನ ಪರವಾಗಿ ರುಜು ಮಾಡಿರಬೇಕು ಅಥವಾ ಪ್ರಮಾಣೀಕರಿಸಿರಬೇಕು. | ಹತ್ತು ರೂಪಾಯಿಗಳು |

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 28ನೇ ಮಾರ್ಚ್, 2015

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**SIXTH SESSION**
**(ADJOURNED MEETINGS)**

# THE KARNATAKA STAMP (AMENDMENT) BILL, 2015
**(L.A. Bill No. 09 of 2015)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the sixty-sixth year of the Republic of India as follows:-

**1. Short title and commencement**.– (1) This Act may be called the Karnataka Stamp (Amendment) Act, 2015.

(2) It shall come into force with effect from the first day of April 2015.

**2. Amendment of schedule**.- In the Karnataka Stamp Act, 1957 (Karnataka Act 34 of 1957) in the schedule,-

(1) in article 5,-

(a) for clause (g), and the entries relating thereto, the following shall be substituted, namely:-

" (g) if relating to sale of moveable property,-

| | |
|---|---|
| (i) possession of the property is delivered or is agreed to be delivered without executing the conveyance | Two percent of the consideration or market value of the property, whichever is higher :<br>Provided that, where a deed of cancellation of earlier agreement is executed by and between the same parties in respect of the same property and if proper stamp duty has been paid on such agreement, the duty on such "deed of cancellation" shall not exceed rupees five hundred. |
| (ii) possession of the property is not delivered | Ten paise for every one hundred rupees or part thereof on the market value equal to the amount of consideration subject to |

| | |
|---|---|
| | a maximum of rupees twenty thousand but not less than rupees five hundred". |

"

(b) after clause (i-d) and the entries relating, the following shall be inserted, namely.-

| | | |
|---|---|---|
| "(i-e) | Chit Agreement, executed in the State of Karnataka under section 6 of the Chit Funds Act, 1982, where the value of the chit,- | |
| | (i) does not exceed rupees one lakh | Rupees one hundred |
| | (ii) exceeds rupees one lakh but does not exceed rupees five lakhs | Rupees Five hundred |
| | (iii) exceeds rupees five lakhs, for every rupees two lakhs or part thereof | Rupees one hundred " |

(2) in article 6,-

(a) for clause (1) and the entries relating thereto, excluding explanation, the following shall be substituted, namely,-

" (1) the deposit of title deeds or instruments constituting or being evidence of the title to any property whatever (other than a marketable security), where such deposit, has been made by way of security for the repayment of money advanced or to be advanced by way of loan or an existing or future debt;

| | |
|---|---|
| If such loan or debt is repayable on demand from the date of instrument evidencing the agreement,- | |
| (i) where the loan or debt amount does not exceed rupees ten lakhs | 0.1 percent on the loan or debt amount subject to a minimum of rupees five hundred |
| (ii) where the loan or debt amount exceeds rupees ten lakhs | 0.2 percent on the loan or debt amount subject to a maximum of rupees ten lakhs." |

(b) in clause (2) and the entries relating thereto, excluding exemption in column 2 and the proviso in column 3, the following shall be substituted, namely,-

" (2) the pawn or pledge of moveable property, where such pawn or pledge has been made by way of security for the repayment of money advanced or to be advanced by way of loan or an existing or future debt.

| | |
|---|---|
| If such loan or debt is repayable on demand or otherwise,- | 0.1 percent on the loan or debt amount |
| (i) where the loan amount exceeds rupees one lakh but does not exceed rupees ten lakhs | |
| (ii) where the loan amount exceeds rupees ten lakhs | 0.2 percent on the loan or debt amount subject to a maximum of rupees ten lakhs." |

(3) in article 9, in column 3, for the words, "Fifty rupees", the words, "rupees one hundred", shall be substituted.

(4) in article 10, in column 3, for the words, "Five hundred rupees for every rupees ten lakhs or part thereof," the words " rupees one thousand for every rupees ten lakhs or part thereof subject to a maximum of rupees fifty lakhs'. shall be substituted.

(5) in article 18, in column 3, for the words, "Fifty rupees", the words, "rupees one hundred", shall be substituted.

(6) in article 19, in column 3, for the words, "One hundred rupees", the words, " Two hundred rupees ", shall be substituted.

(7) in article 20, for clause (5) and the entries relating thereto, the following shall be substituted, namely,-

"(5) Conveyance relating to industrial machinery,-

| | |
|---|---|
| (i) when industrial machinery is treated as movable property | Two percent of consideration or market value of the property, whichever is higher, |
| (ii) when industrial machinery is treated as immovable property | Five percent of consideration or market value of the property, whichever is higher". |

(8) in article 32A,-

(i) in column 2, after the words "Security Deposit" the words "or for carrying on manufacture, trade, business or profession" shall be inserted.

(ii) in clause (ii), in column 3, after the words, "money advanced" the words, "subject to a minimum of rupees fifty", shall be inserted.

(iii) in clause (iii), in column 3, after the words, "money advanced" the words, "subject to a minimum of rupees one hundred", shall be inserted.

(iv) in clause (iv), in column 3, after the words, "money advanced" the words, "subject to a minimum of rupees two hundred", shall be inserted.

(v) in clause (v), in column 3, after the words, "money advanced" the words, "subject to a minimum of rupees three hundred", shall be inserted.

(9) in article 34, for clause (d) and entries relating thereto excluding exemption, the following shall be substituted, namely,-

"(d) for hypothecation of movable property,-

| | |
|---|---|
| If the loan or debt is repayable on demand | |
| (i) where the loan amount does not exceeds rupees ten lakhs | rupees ten for every rupees ten thousands or part thereof |
| (ii) where the loan amount exceeds rupees ten lakhs | rupees twenty for every rupees ten thousands or part thereof, subject to a maximum of rupees ten lakhs". |

(10) in article 37, in clause (c), in column 3, for the words, "One thousand rupees" the words, "rupees fifty", shall be substituted.

(11) in article 38, in column 3, for the words, "Two rupees" the words, " Fifty rupees ", shall be substituted.

(12) after article 40 and the entries relating thereto, the following, shall be inserted, namely.-

| | | |
|---|---|---|
| "40A | **Limited Liability Partnership,-**<br>**A.** constitution of Limited Liability Partnership, or conversion of firm/private company/unlisted public limited company into limited liability partnership, | |
| | (a) where the capital does not exceed rupees ten lakhs | Rupees one thousand |
| | (b) where the capital exceeds rupees ten lakhs; for every rupees five lakh or part thereof exceeding rupees ten lakhs | Rupees five hundred |
| | **B.** Reconstruction or amalgamation of Limited Liability Partnership | Two percent on the consideration or market value of the property whichever is higher of the transferor limited liability partnership located within the State of Karnataka". |

(13) in article 43, in column 3, for the words, "Five rupees", the words, " Fifty rupees ", shall be substituted.

(14) in article 47, for clause (a) and (b) and the entries relating thereto, before the "exemption", the following shall be substituted, namely,

| | |
|---|---|
| "(a) when the amount secured does not exceed rupees one thousand | Fifty paise for every rupees one hundred or part thereof |
| (b) in any other case | Rupees two hundred". |

(15) in article 55, in column 3, for the words, "Ten rupees", the words, " Fifty rupees ", shall be substituted.

## STATEMENT OF OBJECTS AND REASON

To give effect to the proposal made in the Budget speech of 2015-16, It is considered necessary to amend the Karnataka Stamp Act, 1957 (Karnataka Act 34 of 1957),

Hence the Bill.

**FINANCIAL MEMORANDUM**

There is no extra expenditure involved in the proposed legislative measure.

**V. SRINIVASA PRASAD**
**Minister for Revenue**

**P. OMPRAKASHA**
Secretary
Karnataka Legislative Assembly

**ANNEXURE**
**Extract from the Karnataka Stamp Act, 1957**
**(Karnataka Act 34 of 1957).**

**X X XX XX**

**5. Agreement or its records or Memorandum of an Agreement,— XX XX XX**

(g) if relating to sale of moveable Same duty in sub-clause (e) of this property article

**X X XX XX**

**6. Agreement relating to deposit of title deeds, pawn or pledge,-** that is to say, any instrument evidencing an agreement relating to,—

| | |
|---|---|
| (1) the deposit of title deeds or instruments constituting or being evidence of the title to any property whatever (other than a marketable security), where such deposit, has been made by way of security for the repayment of money advanced or to be advanced by way of loan or an existing or future debt; | |
| if such loan or debt is repayable on demand from the date of instrument evidencing the agreement | 0.1percent on the loan or debt amount subject to a maximum of Rs.50,000/- but not less than Rs.500/- |

**Explanation.-** For the purpose of clause (1), notwithstanding anything contained in any law for the time being in force or order of any authority, any letter, note memorandum or writing relating to the deposit of title deeds whether written or made either before or at the time when or after the deposit of title deeds is effected, and whether it is in respect of the security for the first loan or any additional loan or loans taken subsequently, such letter, note, memorandum or writing shall, in the absence of any separate agreement or memorandum of agreement relating to deposit of such title deeds, be deemed to be an instrument evidencing an agreement relating to the deposit of title deeds.

**X X XX XX**

| | |
|---|---|
| (2) the pawn or pledge of moveable property, where such pawn or pledge has been made by way of security for the repayment of money advanced or to be advanced by way of loan or an existing or future debt. | |
| if such loan or debt is repayable on demand | One rupee for every one thousand rupees or part thereof on the loan or debt amount, subject to a maximum of rupees fifty thousand. |

| | |
|---|---|
| **Exemption:** Instruments of pawn or pledge of goods or jewels wherein such loan or debt is upto Rupees one lakh". | Provided that where a fresh instrument of pawn or pledge of movable property is executed for securing repayment of money already advanced by way of loan between the same parties and for the same purpose and for the same amount and the duty in respect of earlier instrument has been paid, then the duty chargeable on such fresh instrument is chargeable as per clause (j) of Article 5 of this Schedule. |

**X X XX XX**

| | |
|---|---|
| **9. Apprenticeship-deed,-** including every writing relating to the service or tuition of any apprentice, clerk or servant placed with any master to learn any pro fession, trade or employment | Fifty rupees |
| **Exemption.-** Instruments of apprenticeship, by which a person is apprenticed by, or at the charge, of any public charity. | |

**X X XX XX**

| | |
|---|---|
| **10. Articles of Association Company,-** where the company has no share capital or nominal share capital or increased share capital. | Five hundred rupees for every rupees ten lakhs or part thereof |
| **Exemption:-** Articles of any association not formed for profit and registered under section 25 of the Companies Act, 1956. | |

**X X XX XX**

| | |
|---|---|
| **18. Charter-party** that is to say any instrument (except an agreement for the hire of a tug-steamer) whereby a vessel or some specified principal part thereof is let for the specified purposes of the charter, whether it includes a penalty clause or not. | Fifty rupees |

**X X XX XX**

| | |
|---|---|
| **19. Composition-deed,-** that is to say, any instrument executed by a debtor, where by he conveys his property, for the benefit of his creditors, or whereby payment of a composition or dividend on their debts is secured to the creditors or whereby provision is made for the continuance of the debtors' business, under the supervision of inspectors or under letters of licence, for the benefit of his creditors. | One hundred rupees |

**X X** **XX** **XX**

| | |
|---|---|
| **20 (1) For Conveyance.- XX XX**<br><br>(2) XX XX XX<br>(3) XX XX XX<br>(4) XX XX XX | |
| (5) Conveyance relating to industrial machinery whether treated as moveable or immoveable property | Five percent of the market value |

**X X** **XX** **XX**

| | |
|---|---|
| **32-A Licence of immovable or moveable property.-** That is to say licence granted by owner or authority for rent or fee or by whatever name it is called and money advanced or security deposit,- | |
| (i) where the license purports to be for a term not exceeding one year in case of residential property | fifty paise for every one hundred rupees or part thereof on the total amount or value of; the average annual rent, premium, fine and money advanced, subject to a maximum of rupees five hundred |
| (ii) where the license purports to be for a term not exceeding one year in case of commercial or industrial property | fifty paise for every one hundred rupees or part thereof on the total amount or value of; the average annual rent, premium, fine and money advanced, |
| (iii) where the license purports to be for a term exceeding one year and not exceeding ten years | one rupee for every one hundred rupees or part thereof on the total amount or value of; the average annual rent, premium, fine and money advanced, |
| (iv) where the license purports to be for a term exceeding ten years and not exceeding twenty years | two rupees for every one hundred rupees or part thereof on the total amount or value of; the average annual rent, premium, fine and money advanced, |

| | |
|---|---|
| (v) where the license purports to be for a term exceeding twenty years and not exceeding thirty years | three rupees for every one hundred rupees or part thereof on the total amount or value of; the average annual rent, premium, fine and money advanced. |

**X X** **XX** **XX**

| | |
|---|---|
| **34. Mortgage deed,-** not being an agreement relating to Deposit of title deeds, pawn or pledge (No. 6), Bottomry Bond (No. 13), Mortgage of a Crop (No. 35), Respondentia Bond (No. 46), or Security Bond (No. 47)<br><br>(a) XX XX XX<br>(b) XX XX XX<br>(c) XX XX XX<br><br>(d) For hypothecation of moveable property | Ten rupees for every ten thousand rupees or part thereof advanced, subject to a maximum of rupees ten thousand. |

**X X** **XX** **XX**

| | |
|---|---|
| **37. Note or Memorandum or record of transactions (Electronic or otherwise).-** Sent by a broker or agent to his principal intimating the purchase or sale on account of such principal or effected by a trading member(agent) through stock exchange or association or otherwise on behalf of the client(principal) resident in the State of Karnataka or otherwise<br>(a) XX XX XX<br>(b) XX XX XX<br>(c) of a Government Security | one rupee for every ten thousand or part thereof of the value of the security, at the time of its purchase or sale, as the case may be, subject to a maximum of one thousand rupees |

**X X** **XX** **XX**

| | |
|---|---|
| **38. Note of Protest,-** by the Master of a ship See also Protest by the Master of a ship (No. 43) | Two rupees |

X X XX XX

| | |
|---|---|
| **43. Protest by the master of a ship,-** that is to say, any declaration of the particulars of her voyage drawn up by him with a view to the adjustment of losses or the calculation of averages and every declaration in writing made by him against the charterers or the consignees for not loading or unloading the ship when such declaration is attested or certified by a Notary Public or other person lawfully acting as such. | Five rupees |

X X XX XX

| | |
|---|---|
| **47. Security bond or mortgage-deed,-** executed by way of security for the due execution of an office, or to account for money or other property received by virtue thereof, or execution by a surety to secure the due performance of a contract. | |
| (a) when the amount secured does not exceed Rs. 1000 | The same duty as a Bond (No.12) for the amount secured. |
| (b) in any other case | One hundred rupees |

X X XX XX

| | |
|---|---|
| **55. Warrant for goods,-** that is to say, any instrument evidencing the title of any person therein named or his assigns, or the holder thereof, to the property in any goods lying in or upon any dock, warehouse or wharf, such instrument being signed or certified by or on behalf of the person in whose custody such goods may be. | Ten rupees. |

X X XX XX

Government Press, Vikasa Soudha, Bengaluru, P7, W.D. , Copies 750, 23th March, 2015